ಅಪೇಕ್ಷೆ ಮಾಡದೆ ಹರಾಜ್ ನಿಮಾಯು ಲೈಸೆನ್ಸು ಜಾರೀ ಮಾಡುವದರಲ್ಲಿ ಬರುತ್ತೆ. ಫಿಬ್ರವರೀ—ನೇ ತಾರೀಖಿನ ನಂತರ ಬರುವ ದರಖಾಸ್ತುಗಳನ್ನ ಮಂಜೂರ ಮಾಡದೇ ವಾಪಸ್ ಮಾಡಲಾಧೀತು.

2. ಷರಾಬ್ ದುಕಾನುಗಳನ್ನ ಹರಾಜಿನಲ್ಲಿ ಪಡಕೊಂಡ 24 ಘೆಂಟೆ ವಳಗಾಗಿ ಹರಾಜು ಮೊಬಲಗು ಪೂರಾ ವಸೂಲ್ ಕೊಡಬೇಕು. ಆ ಮೇರಿಗೆ ಕೊಡದೇ ಯಾವ ದುಕಾನುದಾರ ತಪ್ಪುತ್ತಾನೋ ಅಂಥಾ ದುಕಾನುಗಳನ್ನ ಪುನಹಾ ಹರಾಜಿನಿಂದಾ ಲುಕ್ಸಾನು ಹೊಂದುವ ಮೊಬಲಗ್ಯೆ ಅವ್ವಲ್ ದರಖಾಸ್ತುದಾರನನ್ನ ಗುರಿಮಾಡಲ್ಪಡುತ್ತೆ. ಮಾಯಿ ಲೈಸೆನ್ಸ್ ಫೀ ಕೊಡಬೇಕಾದ ವಿಷಯದಲ್ಲಿಯೂ ನಡವೆಳಿಕೆ ವಿಷಯದಲ್ಲಿಯೂ ಸಹಾ ಈ ವಿಷಯವಾಗಿ ಕೊಡಲ್ಪಡುವ ಲೈಸೆನ್ಸಿನಲ್ಲಿ ನಮೂದಾಗುವ ಷರತ್ತುಗಳಿಗೆ ವಳಪಟ್ಟು ಯಿರಬೇಕು.

3. ಈ ಬಾಬತು ಲೈಸೆನ್ಸು ಫೀ ಮೊಬಲಗನ್ನ ಆಯಾಯ ಖಿಸ್ತಿನ ಪ್ರಕಾರ ಮೊಬಲಗು ಕ್ವಾರ್ಟ್ರರ್‌ಲಿ ಗುರ್ಕೇ ತಾರೀಖಿನಲ್ಲಿಯೇ ವಸೂಲ್ ಕೊಡಬೇಕು, ಹಾಂಗೆ ಕೊಡದೇ ಯಾವ ದುಕಾನುದಾರ ತಪ್ಪುತ್ತಾನೋ ಅಂಥಾ ದುಕಾನನ್ನ ಕೂಲ್ಲೇ ರದ್ದು ಪಡಿಸಿ ಲೈಸೆನ್ಸನ್ನ ವಾಪಸ್ ತರಿಸಿಕೊಳ್ಳಲ್ಪಡುತ್ತೆ.

4. ಮಧ್ಯ ಕಾಲದಲ್ಲಿ ದರಖಾಸ್ತು ಬರುವ ದುಕಾನುಗಳು ಯಾವ ತಿಂಗಳಲ್ಲಿ ಜಾರೀ ಬರುತ್ತೆ ಯೊ ಆ ತಿಂಗಳ್ಳಲ್ಲಿ ಕೆಲವು ದಿವಸ ನಡುವಳೀ ಆದಾಗ್ಯೂ ಆ ಬಾಬತು ದುಕಾನಿಗೆ ರೂಲ್ಸ್ ಪ್ರಕಾರ ಆಗುವ ಆ ತಿಂಗಳ ಪೂರಾ ಲೈಸೆನ್ಸು ಫೀ ಮೊಬಲಗನ್ನ ಕೊಡಬೇಕು.

5. ಗಾಂಜಾ ಬಗೆ ಹರಾಜ್ ಕೈದಾದ ಕೂಲ್ಲೇ ಹರಾಜು ಮೊಬಲಗಿನ ಪಡ ಯರಡು ಖಿಸ್ತಿನ ಹಣವನ್ನ ತೇವಣಾತಿಯಾಗಿ ಇಡಬೇಕಲ್ಲದೆ ಯಿಜಾರೇ ಮೊಬಲಗ್ಯೆ ತಕ್ಕ ಸ್ಟ್ಯಾಂಪು ಕಾಗದದಲ್ಲಿ ಇಜಾರೇ ಮುಚ್ಚ್ಯಳಿಕೆಯನ್ನ ಬರಕೊಟ್ಟು ಲಾಯಖು ಜಾಮೀನು ಸಹಾ ಕೊಡಬೇಕು. ಆ ರೀತಿ ನಡಿಯದೇ ತಪ್ಪಿದ ಪಕ್ಷದಲ್ಲಿ ಬಾಬ್ ಯರಡನೇ ಹರಾಜಿನಿಂದಾ ಲುಕ್ಸಾನು ಹೊಂದುವ ಮೊಬಲಗ್ಯೆ ಅವ್ವಲ್ ದರಖಾಸ್ತುದಾರನನ್ನ ಗುರಿಮಾಡಲ್ಪಡುತ್ತೆ.

6. ಈ ಬಾಬಿನ ಖಿಸ್ತು ಮೊಬಲಗು ಮತ್ತು ಲೈಸೆನ್ಸು ಮೊಬಲಗು ಸಹಾ ಆಯಾಯ ತಿಂಗಳ ತಾರೀಖು 20ರ ವಳಗಾಗಿ ಪೂರಾ ಮೊಬಲಗು ಪಾರಖಾವಣೆಮಾಡಿ ರಸೀತಿ ಪಡಿಯಬೇಕು. ಆ ರೀತಿ ಕೊಡದೇ ತಪ್ಪುವ ಪಕ್ಷದಲ್ಲಿ ಬಾಬ್ ಯರಡನೇ ಹರಾಜಿನಿಂದ ಕಂಭರ್ತಿ ಮೊಬಲಗು ಇಜಾರೇದಾರ ಮತ್ತು ಜಾಮೀನಿದಾರನ ಜಿಂದಗಿಯಿಂದ ಭರ್ತೀ ಮಾಡಿಕೊಳ್ಳಲ್ಪಡುತ್ತೆ.

7. ಈ ಬಾಬತು ಲೈಸೆನ್ಸು ಫೀ ವಿಷಯದಲ್ಲಿಯೂ ಮತ್ತು ನಡವೆಳಿಕೆ ವಿಷಯದಲ್ಲಿಯೂ ಸಹಾ ಈ ವಿಷಯವಾಗಿ ಕೊಡಲ್ಪಡುವ ಲೈಸೆನ್ಸಿನಲ್ಲಿ ನಮೂದಾಗುವ ಷರತ್ತುಗಳಿಗೆ ವಳಪಟ್ಟು ಯಿರುತ್ತೆ.

ಬತಾರೀಖು 24ನೇ ಮಾಹೆ ಜನವರೀ 1876ನೇ ಇಸವಿ, ಮೊಕ್ಕಾಂ ಚಿಕ್ಕಮಗಳೂರು.

P. KRISHNA RAO,
Dy. Commr.

ಮ್ಯಾಗಜೀನ್ ಇಲಾಖಾ.

ತಾರೀಖು 25ನೇ ಜನವರೀ 1876.

ಈ ಕೆಳಗೆ ನಮೂದಿಸಲ್ಪಡತಕ್ಕ ವಸ್ತು ಬಗ್ಯೆ (ಆರಗು ಮೊಹರು ಮಾಡಲ್ಪಟ್ಟ ದರಖಾಸ್ತುಗಳನ್ನು ಬೆಂಗಳೂರಲ್ಲಿರುವ ಆರ್ಡನೆನ್ಸ್ ಕಮ್ಮಿಸ್ಸೇರಿ ಸಾಹೆಬರವರು 1876ನೇ ಇಸವಿ ಫಿಬ್ರವರೀ 29ನೇ ಮುಕ್ತಂ ಮಧ್ಯಾನ್ಹದವರಿಗೂ ತೆಗದುಕೊಳುತ್ತಾರೆ, ಮತ್ತು ಸದರೀ ಕಾಲದಲ್ಲಿ ದರಖಾಸ್ತುಗಳು ತೆಗಿಯಲ್ಪಡುವವು.

ವಸ್ತು	ದರ	ತೇದಾದ್ವೆ ಸಂಖ್ಯೆ	ಯಾವಾಗ ಹಾಜರ್ಮಾಡತಕ್ಕದ್ದು, ಮತ್ತು ಯಾವ ಖಿಸ್ತುಗಳಪ್ರಕಾರ.
ಕುದರೆಗಳ ಖ್ಲ್ಯಾಂಕೆಟ್‌ಗಳು		524	1876ನೇ ಇಸವಿ ಮಾರ್ಚೀ ಗುರ್ಕೇ ತಾರೀಖು ಲಾಗಾಯ್ತು ಪ್ರತಿ ತಿಂಗಳಲ್ಲಿ 250ರ ಪ್ರಕಾರ.

ಮುಖ್ಯಾಂಶ,—ದರಖಾಸ್ತುಗಳ ವಿಷಯದಲ್ಲಿ ಸ್ರ 1872ನೇ ಇಸವಿ ಡಿಶಂಬರು ತಿಂಗಳಿನ ಫೋರ್ಟ್‌ಸೆಂಟ್‌ಜಾರ್ಜ್ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಸಲ್ಪಡುವವು. ಹ್ಹಾಲೀ ಬೇಕಾಗಿರುವ ವಸ್ತುವಿನ ಮಾದ್ರಿಯನ್ನು ನೋಡಬಹುದು. ದರಖಾಸ್ತು ನಮೂನೆಗಳು ಮತ್ತು ಜಾಮೀರ್ ಮೊಬಲಗ್ ಪಾವತೀ ವಗೈರೇ ವಿಷಯಗಳ ದರೋಬಸ್ತು ತಪಶೀಲ್ ಗಳನ್ನು ಬೆಂಗಳೂರು ಕಿಲ್ಲೆ ಯಲ್ಲಿರುವ ಮ್ಯಾಗೆಜೀರ್ ಆಫಿಸ್‌ನಲ್ಲಿ ಭಾನುವಾರ ವ ಸರ್ಕಾರ್ ಮೆಂಟ್ ರಜಾದಿನಗಳು ಯಿವು ಸಿವಾಇ ಮಿಕ್ಕ ಯಾವ ದಿನದಲ್ಲಾಗಲಿ ಬೆಳಿಗ್ಯೆ 9 ಘಂಟೆ ಸಾಯಂಕಾಲ 4 ಘಂಟೆ ಈ ಮಧ್ಯೆ ಯಾವ ಕಾಲದಲ್ಲಾಗಲಿ ತಿಳದು ಕೊಳ್ಳ ಬಹುದಾಗಿರುತ್ತೆ.

ತಾರೀಖು 2ನೇ ಫಿಬ್ರವರೀ 1876.

ಹಳ್ಳೇಸೀಸ 1000 ಪೌಂಡಿಗೆ ವೊಂದು ಲಾಟ್ ಪ್ರಕಾರ 32,000 ಪೌಂಡುಗಳನ್ನು ಕೊಂಡುಕೊಳ್ಳತಕ್ಕ ಬಗ್ಯೆ ಅರಗ್ಲು ಮೊಹರ್ ನಿಂ ಮಾಡಲ್ಪಡುವ ದರಖಾಸ್ತುಗಳನ್ನು ಬೆಂಗಳೂರಲ್ಲಿರುವ ಮ್ಯಾಗೆ ಜೀರ್ ಇ ಚಾರ್ಜ್ ಆರ್ಡ್ ನೆನ್ಸ್ ಕಮ್ಮಿಸ್ಸೇರಿ ಸಾಹೆಬರವರು 1876ನೇ ಇಸವಿ ಮಾರ್ಚೀ ಗುರ್ವೇ ತಾರೀಖಿನ ಮಧ್ಯಾನ್ಹದ ಪರಿಯಂತ ತೆಗದುಕೊಳ್ಳುತ್ತಾರೆ.

ದರಖಾಸ್ತು ಅಂಗೀಕರಿಸಲ್ಪಟ್ಟರೆ, ದರಖಾಸ್ತು ಮಾಡಲ್ಪಟ್ಟ ಸೀಸದ ತೇದಾದಿನ ವೊಟ್ಟು ಕಿಮ್ಮತ್ತಿನ ಮೇಲೆ ಸೇಕಡಾ 10 ರೂಪಾಯಿ ಪ್ರಕಾರ ತೇವಣಿಯನ್ನು 1876ನೇ ಮಾರ್ಚೀ 15 ರಲ್ಲು ಪಾವತೀ ಮಾಡಬೇಕು. ಕೊಂಡುಕೊಳ್ಳಲ್ಪಟ್ಟ ಸೀಸದ ಪೂರಾ ಮೊಬಲಗು ಅದನ್ನು ಸಾಗಿಸುವದಕ್ಕೆ ಮುಂಚೇ ಪಾವತೀ ಮಾಡಬೇಕು.

ಅರ್ಜೀ ಬರದಕೊಳ್ಳುವ ಮೂಲಕ ಮ್ಯಾಗೆಜೀನ್ನಲ್ಲಿ ಸೀಸವನ್ನು ನೋಡಬಹುದು.

ಸ್ರ 1870ನೇ ಇಸವಿ ಜನವರೀ ತಿಂಗಳ ಫೋರ್ಟ್‌ಸೆಂಟ್ ಜಾರ್ಜ್ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ವಿವರಿಸಲ್ಪಟ್ಟ ಷರತ್ತುಗಳ ಪ್ರಕಾರ ದರಖಾಸ್ತುಗಳ ವಿಷಯದಲ್ಲಿ ನಡಿಸಲ್ಪಡುವದು.

D. STRAKER, *Captain, R. A.,*
Commissary of Ordnance.

ನೋಟಸ್.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ನಾರ್ತ್ ಆರ್ಕಾಟ್ ಡಿಸ್ಟ್ರಿಕ್ಟ್ ಅನೇಕ ಕಡೆಗಳಿಂಳಗೂ, ಮತ್ತು ಕಾಳಹಸ್ತ್ರೀ ಷಹರಿನಲ್ಲಿಯೂ, ಉಖಾಲ್ ಜುಲಾಬ್ ಉಪದ್ರವು ಅದ್ಯಾಪು ವ್ಯಾಪಿಸಿರುವದ್ದರಿಂದ ಮುಂದೆ ಬರುವ ನವರಾತ್ರೆ ಹಬ್ಬಕ್ಕೆ ಕಾಳಹಸ್ತ್ರಿಗೆ ಹೋಗ ಯತ್ನಿಸುವ ಜನಗಳು ಈ ವರುಷ ಅಲ್ಲಿಗೆ ಹೊಗೋಣದ್ದರಿಂದ ಉಂಟಾಗುವ ಅಪಾಯಕ್ಕೆ ಗುರಿಯಾಗದಂತೆ ತಿಳಿಯ ಹೇಳಲ್ಪಟ್ಟಿರುತ್ತಾರೆ.

W. S. WHITESIDE,
Collector.

MYSORE GOVERNMENT PRESS, BANGALORE—1876.